ಅ) ಸೇತುವೆಯ 15 ಅಂಕಣಗಳಲ್ಲಿ 2 ಅಂಕಣಗಳು ಮುಗಿದಿದೆ. ಇದಲ್ಲದೆ ಎಂಟು ಕಂಬಗಳು ಹಾಗೂ ಒಂದು ಅಬಟ್‌ಮೆಂಟ್ ಮುಗಿದಿದೆ. ಮಳೆಗಾಲವಾದ್ದರಿಂದ ಕಾಮಗಾರಿ ಈಗ ಪ್ರಗತಿಯಲ್ಲಿಲ್ಲ.

ಆ) ಇದುವರೆವಿಗೂ ಈ ಕಾಮಗಾರಿಗಾಗಿ ಆದ ಒಟ್ಟು ವೆಚ್ಚ 228.67 ಲಕ್ಷ ರೂ.ಗಳು

ಇ) ಗುತ್ತಿಗೆ ಕರಾರಿನ ಪ್ರಕಾರ ಈ ಕಾಮಗಾರಿಯನ್ನು 30.11.97ರೊಳಗೆ ಪೂರೈಸಬೇಕಿದೆ.

ಖಾಲಿ ಇರುವ ಪಶು ವೈದ್ಯಾಧಿಕಾರಿಗಳ ಹುದ್ದೆಗಳು

119 - ಶ್ರೀ ಪ್ರಕಾಶ್ ಬಾ ಹುಕ್ಕೇರಿ (ಸದಗಲಾ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸದಲಗಾ ಕ್ಷೇತ್ರದಲ್ಲಿ ಗಳತಗಾ, ಭೋಜ, ಇಂಗಳಿ ಹಾಗೂ ಎಕ್ಸಂಬಾ ಗ್ರಾಮಗಳಲ್ಲಿಯ ಪಶು ಪರೀಕ್ಷಕರು ಮತ್ತು ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು ಜಾನುವಾರುಗಳಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಇಲ್ಲದ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಸದಲಗಾ ಕ್ಷೇತ್ರದ ಎಲ್ಲ ಪಶುಚಿಕಿತ್ಸಾಲಯ ಆಸ್ಪತ್ರೆಗಳಲ್ಲಿ ಅಟೆಂಡರ್ ಹುದ್ದೆಗಳು ಸುಮಾರು ವರ್ಷಗಳಿಂದ ಖಾಲಿ ಇರುವುದರಿಂದ ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಣೆಯಾಗದೇ ತೊಂದರೆಯಾಗುತ್ತಿರುವುದು ನಿಜವೇ;

ಇ) ಹಾಗಿದ್ದಲ್ಲಿ ಸದರಿ ವಿಷಯಗಳಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಬಂದಿದೆ

ಆ) ಹೌದು

ಇ) ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಮತ್ತು ಪಶುಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿಯಿಂದ ಗ್ರೂಪ್-ಡಿ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ - ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹಣಕಾಸು ಸಂಸ್ಥೆಯಿಂದ ಸಾಲ ಸೌಲಭ್ಯ

2598 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು (ಕೆಎಸ್ ಎಫ್ ಸಿ) 1990 ರಿಂದ ಜೂನ್ 1996ರ ವರೆವಿಗೆ ಎಷ್ಟು ಹಣವನ್ನು ರಾಜ್ಯದ ವಿವಿಧ ಉದ್ಯಮಗಳಿಗಾಗಿ ಸಾಲ ನೀಡಿದೆ?

ಆ) ಆ ಸಾಲಕ್ಕೆ ವಿಧಿಸುವ ಬಡ್ಡಿಯ ದರ ಎಷ್ಟು?

ಇ) ಯುವ ಉದ್ಯಮಿಗಳು ಸಾಲ ಪಡೆಯುವಾಗ ಈ ಸಂಸ್ಥೆಯವರು ಕಿರುಕುಳ ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :